ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ಈ ಗ್ರಾಮೀಣ ಮಟ್ಟದ ರಸ್ತೆಗೆ ಡಾಂಬರು ಹಾಕುವ ಪ್ರಸ್ತಾಪವು ಮಂಗಳೂರು ಜಿಲ್ಲಾ ಪರಿಷತ್ತಿನ ಮುಂದಿದೆ.

ಆ) ಈ ರಸ್ತೆಯ ಒಟ್ಟು 11.17 ಕಿ.ಮೀ. ಉದ್ದದಲ್ಲಿ ಈವರೆಗೆ 2.17 ಕಿ.ಮೀ. ಉದ್ದಕ್ಕೆ ಡಾಂಬರು ಹಾಗಲಾಗಿದೆ. ಉಳಿದ ಉದ್ದಕ್ಕೆ ಅನುದಾನ ಲಭ್ಯತೆಯನ್ನು ಅನುಸರಿಸಿ ಹಂತ ಹಂತವಾಗಿ ಡಾಂಬರನ್ನು ಹಾಕಲಾಗುವುದು.

ಶ್ರೀ ರಮಾನಾಥ ರೈ (ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿಯವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು 'ಅ' ಪ್ರಶ್ನೆಗೆ "ಈ ಗ್ರಾಮೀಣ ಮಟ್ಟದ ರಸ್ತೆಗೆ ಡಾಂಬರು ಹಾಕುವ ಪ್ರಸ್ತಾಪವು ಮಂಗಳೂರು ಜಿಲ್ಲಾಪರಿಷತ್ತಿನ ಮುಂದಿದೆ" ಎಂದು ಹೇಳಿದ್ದಾರೆ. ಮತ್ತೊಂದು ಪ್ರಶ್ನೆಗೆ ಉತ್ತರಿಸುತ್ತಾ, "ಈ ರಸ್ತೆಯ ಒಟ್ಟು 11.17 ಕಿ.ಮೀ. ಉದ್ದದಲ್ಲಿ ಈವರೆಗೆ 2.17 ಕಿ.ಮೀ. ಉದ್ದಕ್ಕೆ ಡಾಂಬರು ಹಾಕಲಾಗಿದೆ. ಉಳಿದ ಉದ್ದಕ್ಕೆ ಅನುದಾನ ಲಭ್ಯತೆಯನ್ನು ಅನುಸರಿಸಿ ಹಂತ ಹಂತವಾಗಿ ಡಾಂಬರನ್ನು ಹಾಕಲಾಗುವುದು" ಎಂದು ಹೇಳುದ್ದಾರೆ. ಈ ರಸ್ತೆಯು ಕುಂದಾಪುರ ತಾಲ್ಲೂಕಿನ ಮೀನುಗಾರಿಕಾ ಪ್ರದೇಶಕ್ಕೆ ಹೋಗತಕ್ಕಂಥ ಕಾವಳಿ ಪ್ರದೇಶದ ಪ್ರಮುಖ ರಸ್ತೆಯಾಗಿದೆ. ಇದಕ್ಕೆ ಮೀನುಗಾರಿಕಾ ಇಲಾಖೆಯಿಂದ ವಿಶೇಷ ಅನುದಾನವನ್ನು ಒದಗಿಸಿಯಾದರೂ ಡಾಂಬರೀಕರಣ ಮಾಡುವುದಕ್ಕೆ ಸೂಕ್ತ ಕ್ರಮವನ್ನು ಸರಕಾರದವರು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಅಧ್ಯಕ್ಷರೆ, ಈ ರಸ್ತೆಯಲ್ಲಿ ಉದ್ದ 11.17 ಕಿ.ಮೀ. ಇದೆ. ಅದರಲ್ಲಿ ಈಗಾಗಲೇ 2.17 ಕಿ.ಮೀ. ಉದ್ದದಷ್ಟಕ್ಕೆ ಡಾಂಬರು ಹಾಕಲಾಗಿದೆ. ಇನ್ನು ಉಳಿದಿರತಕ್ಕಂಥ ಭಾಗಕ್ಕೆ ಡಾಂಬರ್ ಹಾಕಿಸಲು ಹಣಕಾಸನ್ನು ಒದಗಿಸಿಕೊಡುತ್ತೇವೆ. ಎಲ್ಲವನ್ನೂ ಒಂದೇ ಸಾರಿ ಮಾಡಿಮುಗಿಸಿಕೊಡುತ್ತೇವೆ ಎಂದು ನಾನು ಹೇಳಲಾರೆ. ಈ ವರ್ಷವೂ ಕೂಡ ಸ್ವಲ್ಪ ಹಣ ಪ್ರೊವೈಡ್ ಮಾಡೋಣ, ಆ ಕೆಲಸವನ್ನು ತೆಗೆದುಕೊಂಡು ಮುಂದುವರಿಸೋಣ ಎಂದು ಹೇಳಬಯಸುತ್ತೇನೆ.

ಹಿಪ್ಪರಗಿ ಅಣೆಕಟ್ಟು ಯೋಜನೆ ಬಗ್ಗೆ

261 - ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

ಅ) ಹಿಪ್ಪರಗಿ ಆಣೆಕಟ್ಟು ಕೆಲಸವು ಸ್ಥಗಿತಗೊಂಡಿರುವುದಕ್ಕೆ ಕಾರಣವೇನು?

ಆ) ಈ ವರ್ಷ ಹಿಪ್ಪರಿಗೆ ಆಣೆಕಟ್ಟಿಗೆ 20 ಕೋಟಿ ರೂ.ಗಳ ಹಣಕಾಸಿನ ವ್ಯವಸ್ಥೆ ಒದಗಿಸಲಾಗಿದ್ದರೂ ವಿಳಂಬವಾಗುತ್ತಿರುವುದಕ್ಕೆ ಕಾರಣವೇನು?

ಇ) ಪ್ರತಿ ವರ್ಷ ಸಿಬ್ಬಂದಿವರ್ಗಕ್ಕೆ ವಿಚ್ಚಾಗುತ್ತಿರುವ ಹಣದ ಮೊತ್ತವೆಷ್ಟು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಈ ಯೋಜನೆಯ ಅಂದಾಜು ಪಟ್ಟಿಗೆ ಇನ್ನೂ ಮಂಜೂರಾತಿ ಇಲ್ಲದೆ ಇರುವುದರಿಂದ ಮತ್ತು ತಳಪಾಯದಲ್ಲಿ (ಫೌಂಡೇಶನ್) ತೊಂದರೆಗಳು ಉದ್ಭವಿಸಿದ್ದರಿಂದ ಯೋಜನೆಯ ಕೆಲಸವು ಸ್ಥಗಿತಗೊಂಡಿದೆ.

ಆ) ಈ ಯೋಜನೆಗಾಗಿ ಪ್ರಸಕ್ತ ಸಾಲಿನಲ್ಲಿ ಒದಗಿಸಲಾಗಿರುವ ಅನುದಾನದ ಮೊತ್ತ ಒಂದು ಕೋಟಿ ರೂ.ಗಳು ಮಾತ್ರ. ಯೋಜನೆಯ ಪ್ರಗತಿಯಲ್ಲಿ ವಿಳಂಬವಾಗುತ್ತಿರುವುದಕ್ಕೆ ಮುಖ್ಯ ಕಾರಣಗಳನ್ನು (ಅ) ಪ್ರಶ್ನೆಯ ಉತ್ತರದಲ್ಲಿ ವಿವರಿಸಲಾಗಿದೆ.

೨) ಈ ಯೋಜನೆಯ ಸಿಬ್ಬಂದಿವರ್ಗಕ್ಕಾಗಿ ಪ್ರತಿ ವರ್ಷ ಸರಾಸರಿ 14.57 ಲಕ್ಷ ರೂ.ಗಳು ಖರ್ಚಾಗುತ್ತಿವೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಯವರು ಕೊಟ್ಟ ಮೂರು ಉತ್ತರಗಳನ್ನು ನೋಡಿದಾಗ, ಮಾನ್ಯ ಶಿವಾನಂದ ಕೌಜಲಗಿಯವರು ಹೇಳಿದ ಪ್ರಕಾರ ಅವರಿಗೆ ಉತ್ತರ ಕರ್ನಾಟಕದ ಬಗ್ಗೆ ಅಷ್ಟಾಗಿ ಕಳಕಳಿ ಇಲ್ಲ ಎಂದು ಭಾವಿಸಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರು ಅಥಣಿ ತಾಲ್ಲೂಕಿನಲ್ಲಿ ಪ್ರವಾಸ ಕೈಗೊಂಡಿದ್ದಾಗ ಅಲ್ಲಿಯ ಸಾರ್ವಜನಿಕರು ಹಿಪ್ಪರಗಿ ಬ್ಯಾರೇಜ್ ಬಗ್ಗೆ ಮೇಲೆ ಒತ್ತಡ ಮಾಡಿದ್ದರು. ನನ್ನ ಅನಿಸಿಕೆ ಪ್ರಕಾರ, ಇದು ಪ್ರಾರಂಭ ಆಗಿ ಸುಮಾರು 14-15 ವರ್ಷಗಳಾಯಿತು. ಇದು ಯೋಜನೆಯಲ್ಲಿ ಬಂದಿಲ್ಲ ಎಂದು ತಾವು ಹೇಳಿದ್ದೀರಿ. ಇದು ಏಕೆ ಯೋಜನೆಯಲ್ಲಿ ಬಂದಿಲ್ಲ. ಇದಕ್ಕೆ ಅಂದಾಜು ಖರ್ಚು ಎಷ್ಟಾಗುತ್ತದೆ? ಮತ್ತು ಇದನ್ನು ಪೂರ್ತಿ ಮಾಡಲು ಇನ್ನು ಎಷ್ಟು ವರ್ಷ ಬೇಕು. ಎಂದು ದಯಮಾಡಿ ತಿಳಿಸಬೇಕು. ಅಂತೆಯೇ ಈ ಯೋಜನೆಯ ಸಿಬ್ಬಂದಿವರ್ಗಕ್ಕಾಗಿ ಸುಮಾರು 15 ಲಕ್ಷ ರೂಪಾಯಿಗಳನ್ನು ವಿನಾಕಾರಣವಾಗಿ ಖರ್ಚು ಮಾಡುತ್ತಾ ಇದ್ದೀರಿ. ಅವರು ಅಲ್ಲಿ ಯಾವುದೇ ಕೆಲಸವನ್ನು ಮಾಡುತ್ತಿಲ್ಲ. ಆ ಸಿಬ್ಬಂದಿ ವರ್ಗಕ್ಕೆ ಬೇರೆ ಕೆಲಸ ಕೊಡದಿದ್ದರೆ ಈ ಕೆಲಸದಲ್ಲಾದರೂ ಹಣವನ್ನು ತೊಡಗಿಸಿ ಪೂರ್ತಿ ಕೆಲಸ ಮಾಡಲಿಕ್ಕೆ ಇನ್ನೂ ಎಷ್ಟು ಅವಕಾಶ ಬೇಕೆಂದು ತಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ಬಹಳ ವರ್ಷಗಳಿಂದ ನೆನಗುದಿಗೆ ಬಿದ್ದಿರತಕ್ಕದ್ದು ಈ ಹಿಪ್ಪರಗಿ ಬ್ಯಾರೇಜ್, ಆಕ್ರಾಸ್ ಕೃಷ್ಣ ನದಿ. ಅದರಲ್ಲಿ ಏನಾಪುರ ಮತ್ತು ಹಳೆಯಾಳಗಳಲ್ಲಿ ಪ್ರತ್ಯೇಕವಾಗಿ ಎರಡು ಲಿಫ್ಟ್ ಇರಿಗೇಷನ್‌ಗಳನ್ನು ಮಾಡಬೇಕೆಂದು ಉದ್ದೇಶ ಇತ್ತು. ಈ ಯೋಜನೆ ಸುಮಾರು 60 ಸಾವಿರ ಹೆಕ್ಟೇರ್‌ಗಳಷ್ಟು ಪ್ರದೇಶಕ್ಕೆ ನೀರನ್ನು ಕೊಡತಕ್ಕಂಥಾ ಬಹಳ ಮುಖ್ಯವಾದ ಬೃಹತ್ ಯೋಜನೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೂ ಕೂಡ ಹಣಕಾಸಿನ ಲಭ್ಯತೆಯ ವಿಚಾರದಲ್ಲಿ ಹಂತಹಂತವಾಗಿ ಹೋಗತಕ್ಕಂಥ ವಿಚಾರವೂ ಕೂಡ ಇದೆ. ಅಥಣಿಗೆ ನಾನು ಭೇಟಿ ಇತ್ತಿದ್ದಾಗ ಅಲ್ಲಿಯ ಜನರು ಈ ಬಗ್ಗೆ ಒತ್ತಡ ತಂದಿದ್ದರು. ಅದನ್ನು ಇಲ್ಲ ಎಂದು ನಾನು ಹೇಳುತ್ತಿಲ್ಲ. ಈ ಕುರಿತು ಮುಂದೆ ನಾವು ಪರಿಶೀಲನೆ ಮಾಡುವಾಗ ಹೇಗೆ ತೆಗೆದುಕೊಳ್ಳಬೇಕೆಂಬ ಬಗ್ಗೆ ಮಾಡುವ ಸಭೆಗೆ ಆ ಭಾಗದ ಶಾಸಕರೆಲ್ಲರನ್ನೂ ಕರೆಯುತ್ತೇನೆ, ತಮ್ಮನ್ನೂ ಕರೆಯುತ್ತೇನೆ. ಆ ಯೋಜನೆಯ ಬಗ್ಗೆ ಯಾವ ರೀತಿಯಲ್ಲಿ ತೀರ್ಮಾನ ಮಾಡಬೇಕೆಂದು ಆಗ ತಮ್ಮೆಲ್ಲರೊಂದಿಗೆ ಪರಿಶೀಲಿಸಿ ತೀರ್ಮಾನಕ್ಕೆ ಬರೋಣ. ಆ ದಿಸೆಯಲ್ಲಿ ಒಂದು ಸೂಕ್ತವಾದಂಥ ತೀರ್ಮಾನವನ್ನು ಮಾಡುತ್ತೇನೆ.

ಶ್ರೀ ಎಂ.ಎಸ್. ಪಾಟೀಲ್ : ರಾಜ್ಯದಲ್ಲಿರತಕ್ಕಂಥ ಹಲವಾರು ಇರಿಗೇಷನ್ ಪ್ರಾಜೆಕ್ಟ್‌ಗಳ ಅನುಷ್ಠಾನದ ಬಗ್ಗೆ ರಾಜ್ಯಮಟ್ಟದಲ್ಲಿ ಇರಿಗೇಷನ್ ಪ್ರಾಜೆಕ್ಟ್ ಇಂಪ್ಲಿಮೆಂಟೇಷನ್ ಕಮಿಟಿ ಎಂದು ವಿಸ್ತಾದಾದರೂ ಪೈಪವರ್ ಕಮಿಟಿ ಮಾಡುವುದಕ್ಕೆ ಸರಕಾರದವರು ಯೋಜನೆ ಮಾಡುತ್ತಾರೆಯೇ? ಎಂದು ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸದಸ್ಯರು ಕೊಟ್ಟಂಥ ಸಲಹೆಯು ಪರಿಶೀಲಿಸತಕ್ಕಂಥದ್ದು. ಇದಕ್ಕಿಂತ ಹೆಚ್ಚಿಗೆ ಉತ್ತರವನ್ನು ಈ ಸಂದರ್ಭದಲ್ಲಿ ಕೊಡುವುದು ಸಾಧ್ಯವಾಗಲಾರದು ಎಂದು ಭಾವಿಸಿದ್ದೇನೆ.

ಅಧ್ಯಕ್ಷರು : ಶ್ರೀ ನಾರಾಯಣರಾವ್ ಮನಹಳ್ಳಿಯವರ ಪ್ರಶ್ನೆಗೆ ಮಂತ್ರಿಗಳು ಸಮಯ ಕೇಳಿದ್ದಾರೆ ಆದ್ದರಿಂದ ಅದನ್ನು ಮುಂದಕ್ಕೆ ಹಾಕಲಾಗಿದೆ.

ಶ್ರೀ ನಾರಾಯಣ ರಾವ್ ಮನಹಳ್ಳಿ : ಈ ಅಧಿವೇಶನ ಮುಗಿಯುವುದರೊಳಗಾಗಿ ಉತ್ತರವನ್ನು ಕೊಡಬಹುದೆ?

ಅಧ್ಯಕ್ಷರು : ವ್ಯವಸ್ಥೆ ಮಾಡುತ್ತೇವೆ.

(ಮಾನ್ಯ ಸದಸ್ಯರಾದ ಶ್ರೀ ಎಂ.ಪಿ. ಕೇಶವಮೂರ್ತಿಯವರು ಉಪಸ್ಥಿತರಿರಲಿಲ್ಲ)

ರೇಷ್ಮೆ ಬೆಳೆಯ ಬಗ್ಗೆ

656 - ಶ್ರೀ ಸಿ. ಎಂ. ಲಿಂಗಪ್ಪ (ರಾಮನಗರ) : ಮಾನ್ಯ ರೇಷ್ಮೆ ಖಾತೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಟಿ ಗೂಡು ಬೆಳೆಯುವ ರೈತರ ಉದಾಸೀನದಿಂದ ರೇಷ್ಮೆ ಬೆಳೆ ಹಾಳಾಗುತ್ತಿದ್ದು ರೇಷ್ಮೆ ಬೆಳೆಗಾರ ಇಂಥ ಕೋಟ್ಯಾಂತರ ರೂಪಾಯಿಗಳ ಕಪ್ಪಕ್ಕೆ ಗುರಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಲಿ ಇರುವ ನಾಟಿ ಗೂಡು ಬೆಳೆಯುವ ಪ್ರದೇಶವನ್ನು ಕೈಬಿಟ್ಟು ಬೇರೆ ಸುರಕ್ಷಿತ ಪ್ರದೇಶವೊಂದನ್ನು ಆಯ್ಕೆ ಮಾಡಲು ಸರ್ಕಾರದವರು ನಿರ್ಧರಿಸುವರೇ?

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು):

ಅ) ಬಿತ್ತನೆ ವಲಯದ ಎಲ್ಲಾ ಬೆಳೆಗಳ ಬಗ್ಗೆ ಸೂಕ್ತ ಮೇಲ್ವಿಚಾರಣೆಯನ್ನು ಹಾಕಿಕೊಳ್ಳಲಾಗಿದೆ. ಎಲ್ಲೆಲ್ಲಿ ಬೆಳೆಗಳು ಗಂಟು ರೋಗದ ಕಾರಣದಿಂದ ಹಾಗಿವೆಯೋ ಅಂತಹ ಕಡೆಗಳಲ್ಲಿ ಗಂಟು ರೋಗವನ್ನು ನಿಯಂತ್ರಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಆ) ಸದ್ಯಕ್ಕೆ ಬೇರೆ ನಾಟಿ ಗೂಡು ಬೆಳೆಯುವ ಪ್ರದೇಶವನ್ನು ಆಯ್ಕೆ ಮಾಡುವ ಉದ್ದೇಶವಿಲ್ಲ.

ಶ್ರೀ ಸಿ.ಎಂ. ಲಿಂಗಪ್ಪ : ಮಾನ್ಯ ಅಧ್ಯಕ್ಷತೆ, ಮಾನ್ಯ ಮಂತ್ರಿಗಳ ಈ ಉತ್ತರದಿಂದ ಈಗ ಹಾಳಾಗುತ್ತಾ ಇರತಕ್ಕಂಥ ಕೋಟ್ಯಾಂತರ ರೂಪಾಯಿ ಬೆಲೆಬಾಳತಕ್ಕ ರೇಷ್ಮೆ ಬೆಳೆಯತಕ್ಕ ಯಾವ ರೀತಿಯ ಸಮಾಧಾನ ಆಗುತ್ತಾ ಇಲ್ಲ. ಸುಮಾರು ಮೂರು ತಿಂಗಳುಗಳಿಂದ ಪ್ರಾರಂಭವಾದಂಥ ಈ ಒಂದು ಗಂಟು ರೋಗದ ಕಾರಣದಿಂದಾಗಿ ನಮ್ಮ ಭಾಗದಲ್ಲಿ ರೇಷ್ಮೆ ಬೆಳೆ ಬೆಳೆಯತಕ್ಕಂಥ ಸಾವಿರಾರು ಮಂದಿ ರೈತರಿಗೆ ಅಪಾರ ಹಾನಿ ಮತ್ತು ನಷ್ಟವನ್ನು ಉಂಟು ಮಾಡಿದೆ. ಮಾನ್ಯ ಸಚಿವರು ನಿವಾರಣೋಪಾಯದ ಕಾರ್ಯಯಕ್ರಮವನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದೀರಿ. ಅದರಿಂದ ಆ ರೋಗದ ವಿಚಾರದಲ್ಲಿ ಯಾವುದೇ ನಿಯಂತ್ರಣವಾಗಿಲ್ಲ. ಆದುದರಿಂದ ಮಾನ್ಯ ಸಚಿವರು ಈ ಬಗ್ಗೆ ನಿರ್ದಿಷ್ಟವಾದಂಥ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಮುನಿಯಪ್ಪ : ಮಾನ್ಯ ಸದಸ್ಯರು ತಿಳಿಸಿದಂತೆ ಈ ಗಂಟುರೋಗ ಪಬ್ಬುವುದು ಎರಡು ಮೂರು ವರ್ಷಗಳಿಂದ ಜಾಸ್ತಿಯಾಗಿದೆ. ಸರ್ಕಾರ ಈ ಬಗ್ಗೆ ವಿಶೇಷ ಆಸಕ್ತಿವಹಿಸಿ ಆ ರೋಗವನ್ನು ತಡೆಯುವ ಕ್ರಮವನ್ನು ತೆಗೆಮಕೊಳ್ಳುತ್ತಿದೆ. ಅನೇಕ ಸುಧಾರಿತ ಕಾರ್ಯಕ್ರಮ ಹಾಕಿಕೊಳ್ಳುತ್ತಿದೆ. ವಿಶೇಷವಾಗಿ ಆ ಪ್ರದೇಶದ ರೈತರಿಗೆ ಮೂಲ ಸೌಲಭ್ಯಗಳಾದ ರೇಷ್ಮೆ ಹುಳ ಬೆಳೆಸುವ ಮನೆ ಮತ್ತಿತರ ಸಾಮಗ್ರಿಗಳಿಗೆ ಬೇಕಾದ ಹಣವನ್ನು ಸರ್ಕಾರದ ವತಿಯಿಂದ ಒದಗಿಸಿ ಅವರನ್ನು ಬಲಪಡಿಸಿ, ಆ ರೋಗವನ್ನು ತಡೆಯತಕ್ಕ ಯೋಜನೆ ಹಾಕಿದ್ದೇವೆ. ಜೊತೆಗೆ ಇಪ್ಪತ್ತು ದಿವಸ ನಾವು ಎರಡು ಅಥವಾ ಮೂರು ಬಾರಿ ರೋಗ ನಿವಾರಣಾ ಸಿಂಪರಣೆ ಔಷಧವನ್ನು ಹೊಡೆಯುತ್ತಿದ್ದವು, ಈಗ ಸುಮಾರು 6 ಬಾರಿ ಹೊಡೆಯುತ್ತಿದ್ದೇವೆ. ಇತ್ತೀಚೆಗೆ ಇದರಿಂದ ಸ್ವಲ್ಪ ಕಂಟ್ರೋಲ್ ಆಗುತ್ತಿದೆ. ಅಲ್ಲದೆ ಒಳ್ಳೆಯ ಮೊಟ್ಟೆ ಒದಗಿಸುವ ಬಗ್ಗೆ ವಿಶೇಷ ಆಸಕ್ತಿ ವಹಿಸುತ್ತಿದ್ದೇವೆ.